ಅದಕ್ಕೆ ಆರ್.ಟಿ.ಸಿ. ಕೂಡ ಬದಲಾವಣೆ ಮಾಡಿದ್ದು ನನ್ನ ಗಮನಕ್ಕೆ ಬಂದಿದೆ. ಆ ಒಂದು ರಾಶಿ ಹಾಕತಕ್ಕ ಪ್ರದೇಶದ ಆಸುಪಾಸಿನಲ್ಲಿ ಶಾಲೆ ಇದೆ, ವಸತಿಗಳು ಇವೆ, ಪೂಜಾಮಂದಿರ ಇದೆ, ವ್ಯಾಪಾರ ಕೇಂದ್ರ ಇದೆ. ಇಂಥ ಪ್ರದೇಶದಲ್ಲಿ ತ್ಯಾಜ್ಯ ವಸ್ತುಗಳನ್ನು ಹಾಕುವುದು ಖಂಡನೀಯ. ಇದನ್ನು ಮುಂದುವರಿಸಿದರೆ ಊರಿನವರು ವಿರೋಧ ಮಾಡುವ ಮಟ್ಟಕ್ಕೆ ಬಂದಿದ್ದಾರೆ. ಅಲ್ಲಿ ರಾಶಿ ಹಾಕಿದರೆ ದುರ್ನಾಥ ಉಂಟಾಗಿ ಆರೋಗ್ಯ ಕೆಡುವ ಪರಿಸ್ಥಿತಿ ನಿರ್ಮಾಣವಾಗಬಹುದು. ಅದಕ್ಕಾಗಿ ತಕ್ಷಣವೇ ಆ ವ್ಯವಸ್ಥೆಯನ್ನು ಕೈಬಿಡಬೇಕು. ತ್ಯಾಜ್ಯ ವಸ್ತುಗಳನ್ನು ಅಲ್ಲಿ ಹಾಕಬಾರದೆಂದು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಿಳಿಸಿರುವ ಪ್ರಕಾರ ಮಂಗಳೂರು ನಗರ ಪಾಲಿಕೆಯಲ್ಲಿ ತ್ಯಾಜ್ಯ ವಸ್ತುಗಳನ್ನು ವಾಮಂಜೂರು ಎಂಬಲ್ಲಿ ರಾಶಿ ಹಾಕುವ ವ್ಯವಸ್ಥೆ ಇದೆ. ಅಲ್ಲಿ ಸಾಕಷ್ಟು ಜಮೀನು ಇದೆ ಎಂದು ತಿಳಿಸಿದ್ದಾರೆ. ಹಿಂದಿನಿಂದ ಅಲ್ಲಿ ರಾಶಿ ಹಾಕಿಕೊಂಡು ಬರುತ್ತಿದ್ದಾರೆ. ನಮ್ಮ ಶಾಸಕರ ಕ್ಷೇತ್ರವಾದ ಕರಡಿಪಾಳ್ಯ ಎಂಬಲ್ಲಿ ಮತ್ತೆ ಹತ್ತು ಎಕರೆ ಜಾಗ ತೆಗೆದುಕೊಂಡು ಆರ್.ಟಿ.ಸಿ.ಯಲ್ಲಿ ಎಂಟ್ರೀಸ್ ಹಾಕಿ ಅಲ್ಲಿ ಮಾಡಿದರೆ ಪಲ್ಯೂಷನ್ ಆಗುತ್ತದೆ, ಅಲ್ಲಿ ಮಾಡಕೂಡದೆಂದು ತಿಳಿಸಿದ್ದಾರೆ. ಈ ಬಗ್ಗೆ ಅಲ್ಲಿನ ಜಿಲ್ಲಾಧಿಕಾರಿಗಳ ಹತ್ತಿರ ಕೂಡ ಮಾತನಾಡಿದ್ದೇನೆಂದು ಹೇಳಿದ್ದಾರೆ. ನಾನು ಅವರ ಹತ್ತಿರ ಮಾತನಾಡಿ ಅವರು ಏನು ಶಾಸಕರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಿದ್ದಾರೆಂಬುದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಖಖ) ಮಂಗಳೂರು ತಾಲ್ಲೂಕು ಪಂಚಾಯಿತಿ ಕ್ಷೇತ್ರದಲ್ಲಿ ಶೌಚಾಲಯ ನಿರ್ಮಾಣದಲ್ಲಿ ಆಗಿದೆ ಎನ್ನಲಾದ ಅವ್ಯವಹಾರಗಳು.

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಅಧ್ಯಕ್ಷರೆ, ಮಂಗಳೂರು ತಾಲ್ಲೂಕು ಪಂಚಾಯಿತಿ ಕ್ಷೇತ್ರದಲ್ಲಿ 46 ಗ್ರಾಮ ಪಂಚಾಯಿತಿಗಳು ಬರುತ್ತವೆ. ಇತ್ತೀಚೆಗೆ ಒಂದು ಗ್ರಾಮ ಪಂಚಾಯಿತಿಗೆ ನೂರು ಶೌಚಾಲಯಗಳನ್ನು ಒದಗಿಸಿದ್ದಾರೆ. ಆದರೆ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿಗಳ ಜವಾಬ್ದಾರಿಯಲ್ಲಿ ಸುಮಾರು 600 ಶೌಚಾಲಯಗಳಲ್ಲಿ 60 ಜನರಿಗೆ 1600ರಂತೆ, 40 ಜನರಿಗೆ 1200ರ ಹಾಗೆ ಅದನ್ನು ಬದಲಾವಣೆ ಮಾಡಿಕೊಂಡು ಅದರ ಎಲ್ಲಾ ಹಣವನ್ನು ನಗದೀಕರಣ ಮಾಡಿಕೊಂಡು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಿಗೆ ಕಳುಹಿಸಿಕೊಟ್ಟಿದ್ದಾರೆ. ಕಾನೂನಿನ ಪ್ರಕಾರ ಅದನ್ನು ಚೆಕ್ ಮೂಲಕ ವಿತರಿಸಬೇಕಾಗಿತ್ತು. ಆದರೆ ಹಾಗೆ ಮಾಡದೆ ಹಣವನ್ನು ಕೈಯಲ್ಲಿಟ್ಟುಕೊಂಡು 1600ಕ್ಕೆ ದಸ್ಕತ್ತು ತೆಗೆದುಕೊಂಡು 1200 ಕೆಲವರಿಗೆ ಕೊಟ್ಟಿದ್ದಾರೆ. ಇನ್ನು ಕೆಲವು ಕಡೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಿಗೆ ಕೊಟ್ಟದ್ದು, ಯಾರಿಗೆ ಎಷ್ಟು ಕೊಟ್ಟಿದ್ದಾರೆ, ಎಂಥದ್ದು ಕೊಟ್ಟಿದ್ದಾರೆಂದು ಗೊತ್ತಿಲ್ಲ. ಸುಮಾರು 10 ಲಕ್ಷ

ರೂಪಾಯಿಗಳಷ್ಟು ಫೋರ್ಜರಿ ಮಾಡಿದ್ದಾರೆ. ಇದನ್ನು ಮಂಗಳೂರು ತಾಲ್ಲೂಕು ಪಂಚಾಯಿತಿಯವರು ಸ್ವತಃ ತಾಲ್ಲೂಕು ಪಂಚಾಯಿತಿ ಸಭೆಯಲ್ಲಿ ಮಂಡಿಸಿದ್ದಾರೆ. ಅಲ್ಲಿನ ಜಿಲ್ಲಾಪಂಚಾಯಿತಿಯವರು ರಾಜ್ಯ ಸರ್ಕಾರವನ್ನು ತನಿಖೆಗೆ ಒತ್ತಾಯ ಮಾಡಿದ್ದಾರೆ. ಯಾವುದೇ ದಾಖಲೆಗಳು ಇಲ್ಲ. ಶೌಚಾಲಯ ಕಟ್ಟಿಸಿದ ಬಗ್ಗೆ ಬಡತನರೇಖೆಯಿಂದ ಕೆಳಗೆ ಇರುವವರ ಬಗ್ಗೆ ಬಡತನರೇಖೆಯಿಂದ ಮೇಲಿರುವವರ ಬಗ್ಗೆ ಗ್ರಾಮ ಪಂಚಾಯಿತಿಗಳಲ್ಲಿ ದಾಖಲೆಗಳನ್ನು ಇಟ್ಟಿಲ್ಲ. ಗ್ರಾಮಪಂಚಾಯಿತಿಯಲ್ಲಿ ಫಲಾನುಭವಿಗಳ ದಾಖಲೆಯಿಲ್ಲ. ಶೌಚಾಲಯ ಕಟ್ಟಲಿಕ್ಕೆ ಅರ್ಜಿಯನ್ನೂ ಸಹ ಇವರು ತೆಗೆದುಕೊಳ್ಳಲಿಲ್ಲ. ನಗದು ಕೊಡುವ ಯಾವುದೇ ಕಾರ್ಯಕ್ರಮವಿಲ್ಲ ಇವರು ಆ ಕೆಲಸ ಮಾಡಿದ್ದಾರೆ. ಈ ತರಹ ಅವ್ಯವಹಾರಗಳ ಬಗ್ಗೆ ತಾಲ್ಲೂಕು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಂದ ಪೂರ್ಣ ತನಿಖೆ ಮಾಡಿಸಿ ತಪ್ಪಿತಸ್ಥರ ಬಗ್ಗೆ ಯೋಗ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಶೌಚಾಲಯ ಕೊಡುವಾಗ ಈ ತರಹ ಅವ್ಯವಹಾರ ಮಾಡಿರುವುದರಿಂದ ಜನರಿಗೆ ತೊಂದರೆಯಾಗಿದೆ. ಆ ಜನರಿಗೆ ಶೌಚಾಲಯ ಕಟ್ಟಲಿಕ್ಕೆ ಸಹಾಯ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಅನುಸಾಂಗಿಕವಾಗಿ ಮಾತನಾಡುವಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿಯೊಬ್ಬರೂ ಕೂಡ ತಮ್ಮ ದಾಖಲೆಗಳನ್ನು ಗ್ರಾಮಪಂಚಾಯಿತಿಯಲ್ಲಿ ಕೊಡಬೇಕಾಗುತ್ತದೆ. ಅವರ ಮನೆ, ಅವರ ಆರ್ಥಿಕ ಸ್ಥಿತಿಗತಿಯ ಬಗ್ಗೆ ಜಾತಿ ಇವುಗಳನ್ನೆಲ್ಲಾ ನಮೂದಿಸಿದ ಅರ್ಜಿಗಳನ್ನು ಕೊಡಬೇಕಾಗುತ್ತದೆ. ಅದರ ಜೊತೆಗೆ ಗ್ರಾಮಪಂಚಾಯಿತಿಯಲ್ಲಿ ಒಂದು ದಾಖಲೆಯನ್ನೂ ಕೂಡ ಸೃಷ್ಟಿ ಮಾಡಿಕೊಂಡಿದ್ದಾರೆ. ದಾಖಲೆ ಪುಸ್ತಕದಲ್ಲಿ ಅವರ ಫೋಟೋವನ್ನು ಅಂಟಿಸಿ ಅವರು ಕೊಟ್ಟಿರತಕ್ಕ ಮನವಿಯನ್ನೂ ಕೂಡ ಅಂಟಿಸುವಂತಹ ಒಂದು ಪದ್ಧತಿಯನ್ನು ಅವರು ಇಟ್ಟುಕೊಂಡಿದ್ದಾರೆ. ಅದಲ್ಲದೆ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ವೀರೇಂದ್ರಹೆಗಡೆಯವರು ಅವರ ಗ್ರಾಮೀಣಾಭಿವೃದ್ಧಿ ಸಂಸ್ಥೆ ಇಂತಹ ಕೆಲಸಗಳನ್ನು ನಿರಂತರವಾಗಿ ಮಾಡುತ್ತಿದೆ. ಫಲಾನುಭವಿಗಳಿಗೆ ಕೊಟ್ಟಿರತಕ್ಕ ಹಣ ಅಲ್ಲದೆ ಅವರು ತಮ್ಮದೇ ಆಗಿರತಕ್ಕ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವತಿಯಿಂದ ಹಣವನ್ನು ಕೊಟ್ಟು 3500 ರೂ.ಗಳಿಗೆ ಒಂದು ಶೌಚಾಲಯ ಕಟ್ಟುವಂತಹ ಕೆಲಸವನ್ನು ಕೆಲವು ಆಯ್ದ ತಾಲ್ಲೂಕುಗಳಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. ಅದೇ ರೀತಿ ಬೇರೆ ಕಾರ್ಖಾನೆಗಳ ಮಾಲೀಕರು ಕೂಡ ಕೆಲವು ಸಲ ಭಾಗವಹಿಸಿದಂತಹ ಪ್ರಕರಣಗಳುಂಟು. ಆದ್ದರಿಂದ ಬೇರೆ ಜಿಲ್ಲೆಗೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಹೋಲಿಸಿದರೆ ಮತ್ತು ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ವ್ಯಾಪಕವಾಗಿ ಜನಪ್ರಿಯತೆಯನ್ನು ಪಡೆದಿದೆ. ಇದರಲ್ಲಿ ದುರುಪಯೋಗ ಕಡಿಮೆಯಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ, 45 ಗ್ರಾಮಗಳಲ್ಲಿ ಶೌಚಾಲಯದ ಹಣ

ದುರುಪಯೋಗವಾಗಿದೆ ಎನ್ನುವ ಬಗ್ಗೆ ಈ ಕೂಡಲೇ ಅದರ ಬಗ್ಗೆ ವಸ್ತುಸ್ಥಿತಿ ಏನು ಎಂಬುದನ್ನು ತನಿಖೆ ನಡೆಸಿ ವರದಿಯನ್ನು ಕೊಡಬೇಕೆನ್ನುವುದರ ಜೊತೆಗೆ ಮಂಗಳೂರು ವಿಶ್ವವಿದ್ಯಾನಿಲಯದವರು ಒಪ್ಪುವುದಾದರೆ ಅಲ್ಲಿರತಕ್ಕ ಸೋಷಿಯಾಲಜಿ ಡಿಪಾರ್ಟ್‌ಮೆಂಟ್‌ನವರು ಮತ್ತು ಸ್ಟ್ಯಾಟಿಸ್ಟಿಕಲ್ ಡಿಪಾರ್ಟ್‌ಮೆಂಟ್‌ನವರು ಒಂದು ಅಧ್ಯಯನ ಮಾಡಿ ವರದಿ ಕೊಡುವುದಾದರೆ ಒಳ್ಳೆಯದು. ಅಂತ್ಯ ವಿಶ್ವವಿದ್ಯಾನಿಲಯದ ಬಳ್ಳಾರಿ ಜಿಲ್ಲೆಯ ಅಧ್ಯಯನ ವರದಿಯನ್ನು ತಯಾರು ಮಾಡಿಸಿದ್ದೇನೆ. ಕೇವಲ 25 ಸಾವಿರ ರೂಪಾಯಿಗಳನ್ನು ಮಾತ್ರ ಅವರಿಗೆ ಕೊಟ್ಟಿದ್ದೇವೆ. ಅವರು ಅಧ್ಯಯನ ಮಾಡಿ ವರದಿಯನ್ನು ಕೊಟ್ಟಿದ್ದಾರೆ. ಎಲ್ಲೆಲ್ಲಿ ಕಳಪೆ ಕೆಲಸವಾಗಿದೆ ಎಲ್ಲೆಲ್ಲಿ ನಾಪತ್ತೆಯಾಗಿದೆ, ಎಲ್ಲೆಲ್ಲಿ ಗುಂಡಿಗಳು ಇಲ್ಲದೆ ಶೌಚಾಲಯಗಳು ಇವೆ ಈ ರೀತಿ ರೆಪ್ಯುಟೇಟಿವ್ ಕನ್ಸರ್ನ್ ಇದ್ದರೆ ವಿಶ್ವವಿದ್ಯಾನಿಲಯದವರು ಸಲಹೆಯನ್ನು ಕೊಡಬಹುದು. ಅವರು ಭಾಗವಹಿಸುತ್ತೇವೆಂದರೆ ಈ ದಿವಸವೇ ಆಜ್ಞೆ ಮಾಡುತ್ತೇನೆ.

ಎ) ಮಹದೇವ ಟೆಕ್ಸ್‌ಟೈಲ್ಸ್ ಗಿರಣಿಯನ್ನು ಪುನರ್ ಆರಂಭಿಸುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ಮಹಾನಗರದಲ್ಲಿ ಮಹದೇವ ಟೆಕ್ಸ್‌ಟೈಲ್ಸ್ ಮಿಲ್ ಅತ್ಯಂತ ಹಳೆಯದು. ಅದನ್ನು ಸರ್ಕಾರ ಮುಚ್ಚಲಿಕ್ಕೆ ನಿರ್ಣಯ ತೆಗೆದುಕೊಂಡಮೇಲೆ ಅಲ್ಲಿರತಕ್ಕ ಸಾವಿರಾರು ಕಾರ್ಮಿಕರು ಬೀದಿಪಾಲಾಗಿದ್ದಾರೆ. ಬದುಕು ಪ್ರಾರಂಭ ಮಾಡಬೇಕೇ ಬೇಡವೇ ಎನ್ನುವ ಬಗ್ಗೆ ಚಿಂತನೆ ಮಾಡುತ್ತಿದ್ದಾರೆ. ಬಿಐಎಫ್‌ಆರ್ ಮುಂದೆ ಈ ಪ್ರಕರಣ ಇದೆ. ನೌಕರವರ್ಗದ ಹಿತದೃಷ್ಟಿಯಿಂದ ಮಿಲ್‌ನ್ನು ಪುನರ್ ಪ್ರಾರಂಭ ಮಾಡಬೇಕೇ ಅಥವ ಬೇರೆ ವ್ಯವಸ್ಥೆ ಮಾಡುವ ಬಗ್ಗೆ ಸರ್ಕಾರ ಯಾವುದೇ ನಿರ್ಣಯವನ್ನು ಇದುವರೆಗೆ ತೆಗೆದುಕೊಂಡಿಲ್ಲ. ಕಳೆದ ಮೂರು ತಿಂಗಳುಗಳಿಂದ ಅಲ್ಲಿನ ಕಾರ್ಮಿಕರಿಗೆ ವೇತನ ಕೊಡಲಿಲ್ಲ. ಕಾರ್ಮಿಕರು ಬೀದಿಪಾಲಾಗಿದ್ದಾರೆ. ಅವರು ಉಪವಾಸ ಬೀಳುವ ಸ್ಥಿತಿಯಲ್ಲಿದ್ದಾರೆ. ತಕ್ಷಣ ಮೂರು ತಿಂಗಳ ವೇತನವನ್ನು ಬಿಡುಗಡೆ ಮಾಡಬೇಕು. ಮಿಲ್‌ನ್ನು ಪುನರ್ ಪ್ರಾರಂಭ ಮಾಡುವ ಬಗ್ಗೆ ಅಥವ ಕಾರ್ಮಿಕರಿಗೆ ಬೇರೆ ವ್ಯವಸ್ಥೆ ಮಾಡುವ ಬಗ್ಗೆ ತಕ್ಷಣ ನಿರ್ಣಯ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಎಸ್.ಪಾಟೀಲ್ (ಜವಳಿ ಸಚಿವರು): ಮಾನ್ಯ ಸದಸ್ಯರಿಗೆ ಗುರುತಿದ್ದಂತೆ ಇದೇ ತಿಂಗಳು 2ನೇ ತಾರೀಖು ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಲಿಕ್ಕೆ ಮೀಟಿಂಗ್ ಕರೆದಿದ್ದೇ ಅವರು ಬರಲಿಲ್ಲ. ಈಗಾಗಲೇ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇನೆ. ಕಾರ್ಮಿಕರಿಗೆ ಮೂರು ತಿಂಗಳ ವೇತನ ಕೊಟ್ಟಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಡಿಸೆಂಬರ್‌ವರೆಗೆ ಪೇಮೆಂಟ್ ಆಗಿದೆ. ಮೂರು ತಿಂಗಳ ವೇತನ ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೇನೆ.